ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 3738/2023 CW-3 PW- 2

| | |
|---|---|
| ಹೆಸರು | ಸುದರ್ಶನ್ |
| ತಂದೆಯ ಹೆಸರು | ರಾಮಣ್ಣ |
| ವಯಸ್ಸು | 42 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಪಿ.ಡಬ್ಲ್ಯೂಡಿ ಕ್ಯಾಂಪ್, ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ29-06-2026

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ಚಾ.ಸಾ. 1 ಮತ್ತು 2 ರ ಪರಿಚಯ ಇಲ್ಲ. ಸುಮಾರು 2-3 ವರ್ಷಗಳ ಹಿಂದೆ ನಾನು ನನ್ನ ವೈಯಕ್ತಿಕ ಕೆಲಸಕ್ಕಾಗಿ ಪೋಲೀಸ್ ಠಾಣೆಗೆ ಹೋದಾಗ ಪೋಲೀಸರು ನನ್ನನ್ನು ಕರೆದು ಕೆಲವು ದಾಖಲೆಗಳ ಮೇಲೆ ಸಹಿ ಪಡೆದುಕೊಂಡಿರುತ್ತಾರೆ. ಇಷ್ಟರ ಹೊರತಾಗಿ ಬೇರೇನೂ ಗೊತ್ತಿಲ್ಲ.

ಸಾಕ್ಷಿ ನಿ.ಪಿ. 1 ರಿಂದ 3 ರಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ. 1(ಬಿ) ರಿಂದ 3(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

ದಿ: 23-03-2023 ರಂದು ಮ. 2-00 ರ ಸುಮಾರಿಗೆ ನಾನು ಮತ್ತು ಚಾ.ಸಾ. 2 ಸಿಂಧನೂರಿನ ಐಬಿ ಮುಂದೆ ನಿಂತಾಗ ಚಾ.ಸಾ. 1 ಮತ್ತು ಅವರ ಸಿಬ್ಬಂದಿಯವರು ನಮ್ಮನ್ನು ಕರೆದು ಅವರಿಗೆ ಬಂದ ಬಾತ್ಮಿ ವಿಚಾರ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡರು ಎಂದರೆ ಸರಿಯಲ್ಲ. ನಾನು ಮತ್ತು ಚಾ.ಸಾ. 2 ಪಂಚರಿಗೆ ಸಹಕರಿಸಲು ಒಪ್ಪಿಕೊಂಡು ಚಾ.ಸಾ. 1 ರ ಜೊತೆ ಸಿಂಧನೂರಿನ ಪಿ.ಡಬ್ಲ್ಯೂ.ಡಿ. ಕ್ಯಾಂಪ್‌ನ ಮಸ್ಕಿ ರಸ್ತೆಯಲ್ಲಿ ಗಸ್ತು ಕಾರ್ಯ ಮಾಡುತ್ತಿರುವಾಗ ಮ. 2-20 ಕ್ಕೆ ಪಿ.ಡಬ್ಲ್ಯೂ.ಡಿ. ಕಡೆಯಿಂದ ದ್ವಿಚಕ್ರ ಆಟೋ

ಬರುತ್ತಿತ್ತು ಎಂದರೆ ಸರಿಯಲ್ಲ. ಚಾ.ಸಾ. 1 ಅವರ ಸಿಬ್ಬಂದಿಯವರ ಸಹಾಯದಿಂದ ಸದರಿ ವಾಹನ ನಿಲ್ಲಿಸಿ ವಿಚಾರಿಸಲಾಗಿ ಸದರಿ ವಾಹನ ಚಾಲಕ ತನ್ನ ಹೆಸರು ಬಸವರಾಜ ತಂ. ಹುಚ್ಚೀರೆಡ್ಡೆಪ್ಪ, ಸಾ. ಅಮೀನಗಡ ಎಂದು ತಿಳಿಸಿದ ಎಂದರೆ ಸರಿಯಲ್ಲ. ನಂತರ ಚಾ.ಸಾ. 1 ನಮ್ಮ ಸಮಕ್ಷಮ ಸದರಿ ವ್ಯಕ್ತಿಗೆ ವಾಹನದಲ್ಲಿ ಏನಿದೆ ಎಂದು ಕೇಳಲಾಗಿ ಆತ ಗಾಬರಿಯಿಂದ ತಡವರಿಸಿದ ಎಂದರೆ ಸರಿಯಲ್ಲ. ಚಾ.ಸಾ. 1 ನಮ್ಮ ಸಮಕ್ಷಮ ನಿ.ಪಿ. 1 ನ್ನು ತಯಾರಿಸಿ ಸದರಿ ವ್ಯಕ್ತಿಯ ವಾಹನವನ್ನು ಪರಿಶೀಲಿಸಲಾಗಿ ಅದು ಹಳದಿ ಬಣ್ಣದ ವಾಹನವಾಗಿದ್ದು, ಅದರಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 4 ರಟ್ಟಿನ ಪೆಟ್ಟಿಗೆಗಳು ಇದ್ದವು ಎಂದರೆ ಸರಿಯಲ್ಲ. ಅವುಗಳನ್ನು ನಮ್ಮ ಸಮಕ್ಷಮ ತೆಗೆದು ನೋಡಲಾಗಿ 90 ಎಂ.ಎಲ್. ಅಳತೆಯ ಓ.ಸಿ. ವಿಸ್ಕಿಯ 2 ಬಾಕ್ಸ್‌ಗಳು ಅವುಗಳಲ್ಲಿ 192 ಟೆಟ್ರಾಪಾಕೇಟ್‌ಗಳು ಇದ್ದವು ಎಂದರೆ ಸರಿಯಲ್ಲ. ಅದೇರೀತಿ 180 ಎಂ.ಎಲ್. ಅಳತೆಯ ಬಿ.ಪಿ. ವಿಸ್ಕಿಯ 48 ಟೆಟ್ರಾಪಾಕೇಟ್‌ಗಳು ಮತ್ತು 330 ಎಂ.ಎಲ್. ಅಳತೆ ಕೆ.ಎಫ್. ಸ್ಟ್ರಾಂಗ್ ಬಿಯರ್‌ನ 24 ಟಿನ್‌ಗಳು ಇದ್ದವು ಎಂದರೆ ಸರಿಯಲ್ಲ. ನಂತರ ವಾಹನವನ್ನು ಪರಿಶೀಲಿಸಲಾಗಿ ಅದರ ನೊಂದಣಿ ಸಂ. ಕೆ.ಎ. 36/ಎ 6209 ಆಗಿತ್ತು ಎಂದರೆ ಸರಿಯಲ್ಲ. ನಂತರ ಚಾ.ಸಾ. 1 ರವರು ನನ್ನ ಮತ್ತು ಚಾ.ಸಾ. 2 ರ ಸಮಕ್ಷಮ ನಿಯಮಾನುಸಾರ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಈಗ ಓದಿ ಹೇಳಿದ ನಿ.ಪಿ. 2 ರಂತೆ ಪಂಚನಾಮೆಯನ್ನು ಮ. 2-40 ರಿಂದ 3-50 ರ ವರೆಗೆ ಜರುಗಿಸಿದರು ಎಂದರೆ ಸರಿಯಲ್ಲ. ನಿ.ಪಿ. 1 ರಿಂದ 3 ರ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಮತ್ತು ಮುದ್ದೆಮಾಲಿನ ಕುರಿತು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.</u>

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,

ಸಿಂಧನೂರು.